ಕ್ರ.ಸಂ	ಯೋಜನೆ	ಮಂಜೂರು ಮಾಡಿರುವ ಮೊತ್ತ (ರೂ.ಲಕ್ಷಗಳಲ್ಲಿ)
1.	ಧಾರ್ಮಿಕ ಸಂಸ್ಥೆಗಳಿಗಳಿಗೆ ಸಹಾಯಾನುದಾನ	801.00
2.	ಆರಾಧನಾ/ವಿಶೇಷ ಘಟಕ/ ಗಿರಿಜನ ಉಪಯೋಜನೆ	270.00
3.	ಹಿಂದೂ ರುದ್ರಭೂಮಿಗಳ ಅಭಿವೃದ್ಧಿ ಯೋಜನೆ	135.62
	ಒಟ್ಟು	**1206.62**

ಆ) ಈ ಜಿಲ್ಲೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಯೋಜನೆಗಳನ್ನು ಹಮ್ಮಿಕೊಂಡಿರುವುದಿಲ್ಲ.

ಇ) ಈ ಜಿಲ್ಲೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಯಾವುದೇ ಹೊಸ ಯೋಜನೆಗಳನ್ನು ಹಮ್ಮಿಕೊಂಡಿಲ್ಲವಾದ್ದರಿಂದ, ಹೊಸ ಪ್ರಸ್ತಾವಗಳ ಬಗ್ಗೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರಗತಿಯಲ್ಲಿರುವ ಕಾರ್ಮಿಕ ಇಲಾಖೆಯ ಯೋಜನೆಗಳು

170(469); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ(ರಾಯಬಾಗ)

ಅ) ಕಾರ್ಮಿಕ ಇಲಾಖೆಯ ವತಿಯಿಂದ ಪ್ರಗತಿಯಲ್ಲಿರುವ ಯೋಜನೆ ಗಳಾವುವು; ಅವುಗಳಿಗೆ ಮೀಸಲಿಟ್ಟ ಹಣವೆಷ್ಟು (ತಾಲ್ಲೂಕುವಾರು, ಯೋಜನೆವಾರು ವಿವರ ಒದಗಿಸುವುದು)

ಆ) ಜಿಲ್ಲೆಯಲ್ಲಿ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳಾವುವು; ಅವುಗಳ ರೂಪುರೇಖೆಗಳೇನು? (ಯೋಜನೆ ವಾರು ವಿವರ ಒದಗಿಸುವುದು)

ಇ) ಜಿಲ್ಲೆಯಲ್ಲಿ ಇಲಾಖೆಗೆ ಹೊಸ ಪ್ರಸ್ತಾವನೆಗಳೇನಾದರೂ ಬಂದಿವೆಯೇ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು)

ಶ್ರೀ ಸಿ.ಟಿ.ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಕಾರ್ಮಿಕ ಇಲಾಖೆ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

1. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗಾಗಿ 'ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ' ಸ್ಥಾಪಿಸಲಾಗಿದೆ. ಸಂಗ್ರಹವಾದ ಸೆಸ್ ಹಣದಿಂದ ಕಟ್ಟಡ ಕಾರ್ಮಿಕರು ಹಾಗೂ ಅವರ ಅವಲಂಭಿತರ ಅನುಕೂಲಕ್ಕಾಗಿ ಮಂಡಳಿಯಿಂದ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಅನುದಾನದ ಕೊರತೆ ಇರುವುದಿಲ್ಲ.

ಅ) **ನೋಂದಾಯಿಸಿದ ತಕ್ಷಣ ದೊರೆಯುವ ಸೌಲಭ್ಯಗಳು:**

1. ಒಳರೋಗಿ ಧನಸಹಾಯ
2. ಅಪಘಾತ ಪರಿಹಾರ
3. ಪ್ರಮುಖ ಖಾಯಿಲೆಗಳ ಧನಸಹಾಯ
4. ನೋಂದಯಿತರಲ್ಲದ ಕಾರ್ಮಿಕರಿಗೆ ಮರಣ ಮತ್ತು ದುರ್ಬಲತೆ ಪರಿಹಾರ
5. ಅಂತ್ಯಕ್ರಿಯೆಗಾಗಿ ಧನಸಹಾಯ
6. ಅಂಗವಿಕಲತೆ ಪಿಂಚಣಿ

ಬಿ) **ನೊಂದಾಯಿಸಿ ಒಂದು ವರ್ಷ ಪೂರ್ಣಗೊಳಿಸಿದವರಿಗೆ ದೊರೆಯುವ ಸೌಲಭ್ಯ**

7. ಹೆರಿಗೆ ಧನಸಹಾಯ

8. ಶೈಕ್ಷಣಿಕ ಧನಸಹಾಯ

9. ಮದುವೆ ಧನಸಹಾಯ

ಸಿ) **ನೊಂದಾಯಿಸಿ ಎರಡು ವರ್ಷ ಪೂರ್ಣಗೊಳಿಸಿದವರಿಗೆ ದೊರೆಯುವ ಸೌಲಭ್ಯ**

10. ಉಪಕರಣ ಧನಸಹಾಯ

ಡಿ **ನೊಂದಾಯಿಸಿ ಐದು ವರ್ಷ ಪೂರ್ಣಗೊಳಿಸಿದವರಿಗೆ ದೊರೆಯುವ ಸೌಲಭ್ಯ**

11. ಪಿಂಚಣಿ

12. ಮನೆ ಕಟ್ಟುವುದಕ್ಕೆ/ ಖರೀದಿಸುವುದಕ್ಕೆ ಧನಸಹಾಯ

13.

ಇ) **ಕಟ್ಟಡ ಕಾರ್ಮಿಕರಿಗಾಗಿ ಈ ಕೆಳಕಂಡ ಹೊಸ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ:**

ಅ. 100 ಕೌಶಲ್ಯ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ;

ಆ. ನಿರ್ಮಾಣ ಕಾರ್ಮಿಕರಿಗೆ ಬೆಂಗಳೂರಿನಲ್ಲಿ ನಾಲ್ಕು (4) ಹಾಗೂ ಇತರೆ ಒಂಬತ್ತು (9) ಮಹಾನಗರಗಳಲ್ಲಿ ತಲಾ ಒಂದರಂತೆ ವಸತಿ ಸಮುಚ್ಚಯಗಳ ನಿರ್ಮಾಣ;

ಇ. ನಿರ್ಮಾಣ ಕಾರ್ಮಿಕರ ಕೌಶಲ್ಯವನ್ನು ಹೆಚ್ಚಿಸಲು ಬೆಂಗಳೂರಿನಲ್ಲಿ ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ ಅಕಾಡೆಮಿ ಸ್ಥಾಪನೆ.

ಈ. ನಿರ್ಮಾಣ ಕಾರ್ಮಿಕರ ಅವಲಂಭಿತರಾಗಿ ಬೆಂಗಳೂರಿನಲ್ಲಿ ಎರಡು (2), ಮೈಸೂರು, ಗುಲಬರ್ಗಾ, ಬಳ್ಳಾರಿ ಮತ್ತು ಬೆಳಗಾವಿ ಅಥವಾ ಹುಬ್ಬಳ್ಳಿ –ಧಾರವಾಡಗಳಲ್ಲಿ ಉನ್ನತ ಮಟ್ಟದ ಆರು ವಸತಿ ಶಾಲೆಗಳ ಸ್ಥಾಪನೆ.

ಮೇಲ್ಕಂಡ ನಾಲ್ಕು (4) ಹೊಸ ಯೋಜನೆಗಳಿಗೆ ರೂ 800 ಕೋಟಿ ಎಂದು ಅಂದಾಜಿಸಲಾಗಿದೆ.

2. ಅಸಂಘಟಿತ ಕಾರ್ಮಿಕರಿಗಾಗಿ ಕರ್ನಾಟಕ ರಾಜ್ಯ ಸಮಾಜಿಕ ಭದ್ರತಾ ಮಂಡಳಿಯಿಂದ ಈ ಕೆಳಕಂಡ ಯೋಜನೆಗಳು ಜಾರಿಯಲ್ಲಿರುತ್ತವೆ.

ಅ. ಎನ್. ಪಿ. ಎಸ್ ಲೈಟ್– ಸ್ವಾವಲಂಭನ್ ಪಿಂಚಣಿ ಯೋಜನೆ (ಕೆಂದ್ರ ಸರ್ಕಾರದ ಯೋಜನೆ). ಈ ಯೋಜನೆಗೆ 2013–14 ನೇ ಸಾಲಿನಲ್ಲಿ ₹450 ಲಕ್ಷಗಳನ್ನು ಮೀಸಲಿಡಲಾಗಿದೆ. ಇದರಲ್ಲಿ ತಾಲ್ಲೂಕು ವಾರು ಪ್ರತ್ಯೇಕವಾಗಿ ವಿಂಗಡಣೆ ಮಾಡಲಾಗಿರುವುದಿಲ್ಲ.

ಆ. ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ (ರಾಜ್ಯ ಸರ್ಕಾರದ ಯೋಜನೆ). ಈ ಯೋಜನೆಗೆ 2013–14 ನೇ ಸಾಲಿನಲ್ಲಿ ₹ 400 ಲಕ್ಷಗಳನ್ನು ಮೀಸಲಿಡಲಾಗಿದೆ. ಇದರಲ್ಲಿ ತಾಲ್ಲೂಕು ವಾರು ಪ್ರತ್ಯೇಕವಾಗಿ ವಿಂಗಡಣೆ ಮಾಡಲಾಗಿರುವುದಿಲ್ಲ.

ಇ. ರಾಷ್ಟ್ರೀಯ ಸ್ವಾಸ್ಥ್ಯ ಭಿಮಾ ಯೋಜನೆ (ಕೇಂದ್ರ ಸರ್ಕಾರದ ಯೋಜನೆ) ಈ ಯೋಜನೆಗೆ 2013–14 ನೇ ಸಾಲಿನಲ್ಲಿ ₹ 1120 ಲಕ್ಷಗಳನ್ನು ಮೀಸಲಿಡಲಾಗಿದೆ. ಇದರಲ್ಲಿ ತಾಲ್ಲೂಕುವಾರು ಪ್ರತ್ಯೇಕವಾಗಿ ವಿಂಗಡಣೆ ಮಾಡಲಾಗಿರುವುದಿಲ್ಲ.

3. ಸಂಘಟಿತ ಕಾರ್ಮಿಕರಿಗಾಗಿ ಕರ್ನಾಟಕ ಕಲ್ಯಾಣ ಮಂಡಳಿಯನ್ನು ರಚಿಸಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

1) ವಿದ್ಯಾರ್ಥಿ ವೇತನ

2) ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ

3) ವೈದ್ಯಕೀಯ ನೆರವು

4) ಕಾರ್ಮಿಕ ಸಂಘಟನೆಗಳು ಹಮ್ಮಿಕೊಳ್ಳಲು ವಾರ್ಷಿಕ ಕ್ರೀಡಾಕೂಟ ಮತ್ತು ಆರೋಗ್ಯ ತಪಾಸಣೆ ಶಿಬಿರಕ್ಕೆ ಧನ ಸಹಾಯ

2013–14 ನೇ ಸಾಲಿನಲ್ಲಿ ಸರ್ಕಾರದ ವತಿಯಿಂದ ₹ 137 ಲಕ್ಷ ಗಳನ್ನು ಮೀಸಲಿಡಲಾಗಿದೆ. ಇದರಲ್ಲಿ ಅನುದಾನವನ್ನು ತಾಲ್ಲೂಕು ವಾರು ಪ್ರತ್ಯೇಕವಾಗಿ ವಿಂಗಡಣೆ ಮಾಡಲಾಗುವುದಿಲ್ಲ.

ಆ. ಇಲಾಖೆಯಿಂದ ಜಾರಿಗೊಳಿಸುತ್ತಿರುವ ಈ ಮೇಲಿನ ಯೋಜನೆ ಗಳನ್ನು ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿಯೂ ಅನುಷ್ಠಾನ ಮಾಡಲಾಗುತ್ತಿದೆ.

ಇ. ಯಾವುದೇ ಹೊಸ ಪ್ರಸ್ತಾವನೆ ಬಂದಿರುವುದಿಲ್ಲ.

ಕ್ರೀಡಾಂಗಣಗಳು ಹಾಳಾಗಿರುವುದು

171/253; ಶ್ರೀ ಅಖಂಡ ಶ್ರೀನಿವಾಸಮೂರ್ತಿ ಆರ್(ಪುಲಕೇಶಿನಗರ)

ಅ. ಪುಲಕೇಶಿ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕ್ರೀಡಾಂಗಣಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ. ಹಾಗಿದ್ದಲ್ಲಿ ಈ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಿರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ಪೂರ್ಣ ವಿವರ ನೀಡುವುದು)

ಇ. ಇಲ್ಲದಿದ್ದಲ್ಲಿ, ಈ ಕ್ರೀಡಾಂಗಣಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ. ಅಭಯ ಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)

ಅ. ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ. ಇಲ್ಲ.